*ಇಸ್ಮಾಯಿಲ್ ನದಾಫ್, ಆಲೂರ*
*ನಾವು ನಮಗೆ ಮಾಡಲೇಬೇಕಾದ ಕರ್ತವ್ಯ?*



ನಿತ್ಯಕರ್ಮ!

*ಎಸ್.ಜಿ.ರಾಜಶೇಖರ ರೆಡ್ಡಿ, ಗೌರಿಬಿದನೂರು*
*ಅಂದು ಊರಿಗೆ ಬಂದವಳು ನೀರಿಗೆ ಬರದೆ ಇರುತ್ತಾಳೆಯೇ... ಇಂದು?*
ಮೂಲೆಗೆ ಬಂದವಳು ಮಾಲ್‌ಗೆ ವಿಸಿಟ್ ಮಾಡ್ದೇ ಇರ್‍ತಾಳ್ಯೇ...

*ರಮೇಶ್, ಹನುಮನಾಳು*
*ಮುಸ್ಸಂಜೆ ಮಾತಾಡಿದ ಗೆಳತಿ ಮುಂಜಾನೆಗೆ ಬಾ ಎನ್ನುತ್ತಿದ್ದಾಳೇಕೆ?*
ಪಾಪ! ಬಿಪಿಒದಲ್ಲಿ ಕೆಲಸ ಮಾಡುವವಳಿರಬೇಕು!

*ರಾಜೀವಕುಮಾರ ಬಿ ಪೂಜಾರ, ಮಾಗಳ*
*ನಿಮ್ಮ ಕಡೆ ಕನ್ಯೆಯರಿದ್ದಾರೆಯೇ?*
ಇಲ್ಲದೆ ಏನು! ಹೌಸ್ ಫುಲ್ ಆಗಿರುವ ಬಾಲಕಿಯರ ಪ್ರೌಢಶಾಲೆಗಳೇ ಇವೆ!

*ರಾಜು ಎಸ್ ಗಾಲಿ, ಅಥಣಿ*
*ಮಧ್ಯರಾತ್ರಿಯಲ್ಲಿಯೇ ಬೆಲೆಗಳು ಏರುತ್ತವೆ ಹಾಗೂ ಜಾರಿಗೆ ಬರುತ್ತವೆ ಏಕೆ?*




ಭಾರತದ ಬೆಲೆಯೂ (ಸ್ವಾತಂತ್ರ್ಯ ಬರುವುದರ ಮೂಲಕ) ಏರಿದ್ದು ಮಧ್ಯರಾತ್ರಿಯೇ ಅಲ್ಲವೇ! ಅಂದಿನಿಂದ ಇಂದಿನವರೆಗೂ ಅದೇ ಪದ್ಧತಿಯಾಗಿದೆ ಅಷ್ಟೆ!

*ಮಹಾವೀರ ಕಾಸರ, ಚನ್ನಗಿರಿ*
*ಗೆದ್ದ ಶಾಸಕರೆಲ್ಲರನ್ನೂ 15 ದಿವಸಕ್ಕೊಬ್ಬರಂತೆ ಮುಖ್ಯಮಂತ್ರಿ ಮಾಡಿದರೆ...?*
ಕುಮಾರಣ್ಣನಂತಹವರು ಒಬ್ಬರು ಕೂತರೆ ಮಿಕ್ಕವರಿಗೆ ಮಣ್ಣೇ ಎಂಬ ಭಯವಂತೆ!

*ಎಂ.ಬಿ.ಶೋದಾನಪೂರ, ಸವದತ್ತಿ*
*ಪರಸತಿ ಬಯಸುವವರಿಗೆ ಅದು ಎಂಜಲನ್ನ ಎನ್ನುವುದು ತಿಳಿಯದೇ?*
ರೇಷ್ಮೆಯೂ ಎಂಜಲೇ ಆದರೂ ಎನಿತು ಸೊಗಸು ಎಂಬುದು ಅವರ ವಾದವಂತೆ!

*ಶಿವಮೊಗ್ಗ ರಮೇಶ್, ಮೈಸೂರು*
*ಪರಿಶ್ರಮವಿಲ್ಲದೆ ಬರೀ ಅದೃಷ್ಟವನ್ನೇ ನಂಬಿ ಕುಳಿತರೆ ಯಶಸ್ಸು ಹೇಗೆ ಸಿಗುತ್ತದೆ?*
ಮಾವ ಹಾಕಿಕೊಟ್ಟ ಲಾಟರಿ ಏಜೆನ್ಸಿ ನಡೆಸುವುದರ ಮೂಲಕ!

*ಗಾಯತ್ರಿ, ರಾಜಾಜಿನಗರ*
*ಮಕ್ಕಳನ್ನು ಅತ್ತೆಯ ಹತ್ತಿರ ಬಿಡದೆ ತಾಯಿಯ ಹತ್ತಿರವೇ ಬಿಡುತ್ತಾರಲ್ಲಾ?*
ಅತ್ತೆ, ಗಂಡನನ್ನು ಸಾಕಿರುವ ರೀತಿ ಕಂಡೂ ಮಕ್ಕಳನ್ನು ಅಲ್ಲಿ ಬಿಡುವುದೇ? ಎಂದಳೊಬ್ಬ ಸೊಸೆ.

*ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ*
*ಬದುಕು ಜಟಕಾಬಂಡಿಯೋ, ರೈಲು ಪ್ರಯಾಣವೋ, ಸೈಕಲ್ ಸವಾರಿಯೋ?*
ಸಾಕಷ್ಟು ಸೈಕಲ್ ಹೊಡೆದು, ರೈಲು ಬಿಡುತ್ತಾ, ಟಾಂಗ್ ಆದವರನ್ನು (ತೊಡರುಗಾಲು ನೀಡಿದವರನ್ನು) ದಾಟುತ್ತಾ ಸಾಗುವ ಸುದೀರ್ಘ ನಡಿಗೆ!

*ಕೃಷ್ಣಮೂರ್ತಿ ಮನ್ನಾರ, ಶಿರಸಿ*
*ಜೈನಮುನಿಗಳು ಬೆತ್ತಲೆ ಇರುತ್ತಾರಲ್ಲಾ, ಅವರಿಗೆ ಬಟ್ಟೆ ಭಯ ಎಂಬ ರೋಗವೆ?*
ಛಿ! ಮನದಲ್ಲಿ ಮಗುವಿನ ನಿರ್ಮಲತೆ ಹೊಂದಿದ ಆ ಮುನಿಗಳನ್ನು ಕಾಮಾಲೆ ಕಣ್ಣಿಂದ ನೋಡಬೇಡಿ.

*ರಾಜಶೇಖರರೆಡ್ಡಿ, ಹಿಂದೂಪುರ*
*ಪ್ರಪಂಚದ ಎಂಟನೆಯ, ಒಂಬತ್ತನೆಯ ಅದ್ಭುತಗಳು ಯಾವುವು?*
ಅರಿತೂ ಪ್ರಶ್ನೆ ಕೇಳುವ ನೀವು, ತಿಳಿಯದೆಯೂ ಉತ್ತರಿಸುವ ನಾನು!

*ಸವಿರವಿ, ಕೊಪ್ಪ*
*ಮನುಷ್ಯನಿಗೆ ಬದುಕಲು ಧೈರ್ಯ ಬೇಕೋ, ಸಾಯಲು ಧೈರ್ಯ ಬೇಕೋ?*
ಸಾಯಲು! ಬದುಕಲು ಬೇಕಾದ್ದು ಛಲ!

*ಎಸ್.ನರೇಂದ್ರನಾಯಕ್, ಗಂಗೊಳ್ಳಿ*
*ಇತ್ತೀಚೆಗೆ ವೃದ್ಧಾಶ್ರಮಗಳು ಹೆಚ್ಚಾಗುತ್ತಿದೆಯಲ್ಲಾ ಸಾರ್?*
ಇದೇ ವಾಸಿ. ವಿದೇಶದಲ್ಲಿ ಮಾತಾಪಿತೃಗಳನ್ನು ಎಲ್ಲೆಂದರಲ್ಲಿ ಬಿಟ್ಟುಬರುವ ಹೀನ ಪದ್ಧತಿ ಶುರುವಾಗಿದೆ.

*ಹೆಚ್.ಸಿ.ನಾಗರತ್ನ, ಬೆಂಗಳೂರು*
*ನಮ್ಮ ಓದದ ಮಕ್ಕಳಿಗೆ ಊಟ ಹಾಕುವುದಿಲ್ಲವೆಂದು ಹೆದರಿಸಿದರೆ ಮಕ್ಕಳು ಊಟವನ್ನೇ ಬಿಡುತ್ತವಲ್ಲ?*
ಊಟದ ಬದಲು ಪಿಜ್ಜಾ, ಬರ್ಗರ್ ಕೊಡಿಸಿರುತ್ತೀರಲ್ಲಾ... ಉಳ್ಳವರ ಮಕ್ಕಳಿಗೆ ಬಡತನದ ಹಸಿವು ಅರಿವಾಗದು ಬಿಡಿ.

## ಬಹುಮಾನಿತ ಪ್ರಶ್ನೆ

*ಎಂ.ಜಿ.ರಾಜಶೇಖರ ಶೆಟ್ಟಿ ದೊಡ್ಡ ಬಳ್ಳಾಪುರ*
*ಇನ್ನೊಬ್ಬರ ಮಂತ್ರಿಪದವಿ ಕಿತ್ತುಕೊಂಡವರಿಗೆ ಬುದ್ಧಿ ಹೇಳುವ ಬದಲು ಆಶೀರ್ವಾದ ಮಾಡುವ ಸ್ವಾಮಿಗಳು ಸಣ್ಣ ಮನಸ್ಸಿನವರಲ್ಲವೇ?*
ಸ್ವಾಮಿಗಳಿಗೆ ಯಾರು ಮಂತ್ರಿಯಾದರೇನು... ಬಂದವರ ತಲೆಯ ಮೇಲೆ ಕೈ ಇಡುವುದು ಒಂದೇ ಅವರ ಧರ್ಮ!

*ಮಹಾವೀರ ಕಾಸಾರ, ಚನ್ನಗಿರಿ*
*ಬೆಂಗಳೂರು ಇತ್ತೀಚೆಗೆ ಎಲ್ಲೆಡೆಯ ರೌಡಿಗಳ ಅಡಗುದಾಣವಾಗುತ್ತಿದೆಯಲ್ಲಾ?*
ಗಡಿ ವಿಸ್ತಾರವಾದಷ್ಟೂ ಭಾನಗಡಿ, ಎಕ್ಸ್‌ಟೆನ್ಶನ್ ಹೆಚ್ಚಿದಷ್ಟೂ ಟೆನ್ಶನ್ ಹೆಚ್ಚುವುದು ಸಹಜ!

*ವಿಜಯ್ ಕೆ ವಿಭೂತಿ, ಹರಿಹರ*
*ಪ್ರೀತಿಸುವ ಹೃದಯಗಳಿಗೆ ಮಾನವೀಯ ನಯನಗಳಿದ್ದರೆ ಏನಾಗುತ್ತಿತ್ತು ಅಂಕಲ್?*
ಹೃದಯಗಳಿಗೆ ನಯನಗಳೇ? ಪ್ರೀತಿ ಕಡಿಮೆಯಾದರೆ ಆ ನಯನಗಳಿಗೆ ಕಾಂಟಾಕ್ಟ್ ಲೆನ್ಸ್ ಹಾಕಬೇಕಾಗುತ್ತಿತ್ತು!

*ಜಿ.ಆದಿನಾರಾಯಣಮುನಿ, ಆದಿವಾಲ*
*ದೇಹವೇ ದೇವಾಲಯವಾದರೂ ಈ ದೇಹವನ್ನು ದಂಡಿಸಿ ದೇವಾಲಯಕ್ಕೆ ಹೋಗುವ ಅರ್ಥವಾದರೂ ಏನು?*
ಮನವೆಂಬ ಗರ್ಭಗುಡಿಯಲ್ಲಿನ ಕಸ ತೊಡೆಯಲು ದೇಗುಲದ ಪರಿಸರ ಉಪಯುಕ್ತವಂತೆ!

*ಬಿ.ಎಂ.ಪರಶಿವಮೂರ್ತಿ, ಬೆಂಗಳೂರು*
*ಗಂಡನ ಜೇಬಿನಿಂದ ಹೆಂಡತಿ ಹಣ ಕದ್ದರೆ ತಪ್ಪೋ ಸರಿಯೋ?*



ಧರಿಸಿರುವಾಗ ಕದ್ದರೆ ತಪ್ಪು, ನೇತುಹಾಕಿರುವಾಗ ತೆಗೆದುಕೊಂಡರೆ ಆ ಜೇಬು ಮನೆಗೆ ಸೇರಿದ ಆಸ್ತಿಯಾದ್ದರಿಂದ ಅದು ಅವಳಿಗೂ ಸೇರಿದ ಹಕ್ಕು!

■ ರಾಮ್